ಈ ದಿನ ದಿನಾಂಕ 28-02-2020 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು ಶ್ರೀ ಪಿ ಕೆ ಜಿ ವಕೀಲರಿಂದಃ**

ನಮ್ಮ ತಂದೆ ಹೆಸರು ಅಂಜಿನಪ್ಪ. ಅಂಜಿನಪ್ಪರವರ ತಂದೆ ಹೆಸರು ದೊಡ್ಡೇಗೌಡ. ಸದರಿ ದೊಡ್ಡೇಗೌಡರವರನ್ನು ದೊಡ್ಡಪ್ಪ ಎಂದೂ ಸಹ ಕರೆಯಲಾಗುತ್ತದೆ. ನಮ್ಮ ತಂದೆ ಅಂಜಿನಪ್ಪರವರಿಗೆ 7 ಜನ ಮಕ್ಕಳು ಅವರಲ್ಲಿ 4 ಜನ ಗಂಡು ಮಕ್ಕಳು, 3 ಜನ ಹೆಣ್ಣು ಮಕ್ಕಳು. ಅವರೆಂದರೆ ನಾರಾಯಣಪ್ಪ, ರಾಮಯ್ಯ ಕ್ಯಾತಪ್ಪ, ದೊಡ್ಡೇಗೌಡ ಮತ್ತು ಚೆನ್ನಮ್ಮ, ಗೌರಮ್ಮ ಮತ್ತು ರತ್ನಮ್ಮ. ನಾರಾಯಣಪ್ಪ ಮೃತಪಟ್ಟಿರುತ್ತಾರೆ. ನಾರಾಯಣಪ್ಪರವರಿಗೆ 3 ಜನ ಮಕ್ಕಳು. ಅವರೆಂದರೆ ವಿಜಯ್‌ಕುಮಾರ್, ಗೀತಾ ಮತ್ತು ವೇಣು ಎಂದರೆ ಸರಿ.

ಸರ್ವೆ ನಂ 66/4ಬಿ ರ ವಿಸ್ತೀರ್ಣ ಎಷ್ಟಿದೆ ಎಂದರೆ ಸಾಕ್ಷಿ ನನಗೆ ಸರಿಯಾಗಿ ಗೊತ್ತಾಗುವುದಿಲ್ಲ ಆದರೆ ಸದರಿ ಜಮೀನನ್ನು ತೋರಿಸಬಲ್ಲೆ. ಸದರಿ ಜಮೀನು ಸೀಗೆಹಳ್ಳಿಯಲ್ಲಿದೆ. ಸದರಿ ಜಮೀನು ಪದ್ಮಾರವರ ಹೆಸರಿನಲ್ಲಿದೆ. ಸದರಿ ಜಮೀನನ್ನು ಪದ್ಮಾರವರು ವಿಜಯ್‌ಕುಮಾರ್ ಬಿನ್ ನಾರಾಯಣಪ್ಪರವರಿಂದ ಕ್ರಯಕ್ಕೆ ಪಡೆದಿರುತ್ತಾರೆಂದರೆ ಸಾಕ್ಷಿ ಸದರಿ ಜಮೀನನ್ನು ವಿಜಯ್‌ಕುಮಾರ್‌ರವರ ಮಾರಿ ಇನ್ನೊಂದು ಜಮೀನಾದ ಸರ್ವೆ ನಂ 117 ನ್ನು ಕ್ರಯಕ್ಕೆ ಪಡೆದಿರುತ್ತಾರೆ. ಸರ್ವೆ ನಂ 66/4ಬಿ ಜಮೀನು ಮೂಲತಃ ಅಂಜಿನಪ್ಪರವರಿಗೆ ಸೇರಿದ್ದು ಎಂದರೆ ಸರಿ. ಸದರಿ ಸರ್ವೆ ನಂ 66/4ಬಿ ಜಮೀನನ್ನು ನಮ್ಮ ತಂದೆ ಅಂಜಿನಪ್ಪರವರು ರಾಮೇಗೌಡ ಬಿನ್ ಬೈರೇಗೌಡರವರಿಗೆ ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ. ರಾಮೇಗೌಡರವರು ಸರ್ವೆ ನಂ 66/4 ಬಿ ಜಮೀನನ್ನು ನಮ್ಮ ಅಣ್ಣ ನಾರಾಯಣಪ್ಪರವರಿಗೆ ದಿನಾಂಕ 27-04-1984 ರಂದು ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ.

ನಾರಾಯಣಪ್ಪರವರು 1984 ರ ನಂತರ ಮರಣ ಹೊಂದಿರುತ್ತಾರೆ. ನಾರಾಯಣಪ್ಪರವರು ಮರಣಾನಂತರ ಸರ್ವೆ ನಂ 66/4ಬಿ ಜಮೀನಿಗೆ ನಾರಾಯಣಪ್ಪರವರ ಮಗನಾದ ವಿಜಯ್‌ಕುಮಾರ್‌ರವರ ಹೆಸರಿಗೆ ಖಾತೆಯಾಗಿರುತ್ತದೆಂದರೆ ಸರಿಯಲ್ಲ. ಸದರಿ ಸ್ವತ್ತಿಗೆ ವಿಜಯ್‌ಕುಮಾರ್‌ರವರ ಹೆಸರಿಗೆ ಖಾತೆಯಾದ ನಂತರ ಸದರಿ ಸ್ವತ್ತನ್ನು ಪದ್ಮಾರವರಿಗೆ ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ. ನಮ್ಮ ಅಣ್ಣ ನಾರಾಯಣಪ್ಪ ಮೀನುಗಾರಿಕೆ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು. ನಾರಾಯಣಪ್ಪರವರಿಗೆ 1957 ರಲ್ಲಿ ಮೀನುಗಾರಿಗೆ ಇಲಾಖೆಯಲ್ಲಿ ಕೆಲಸ ಸಿಕ್ಕಿರುತ್ತದೆಂದರೆ ಸಾಕ್ಷಿ ಅದು ನನಗೆ ಗೂತ್ತಿಲ್ಲ. ಪ್ರತಿವಾದಿಯರು ಅದನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆಂದು ನುಡಿಯುತ್ತಾರೆ. ನಾರಾಯಣಪ್ಪರವರು ಯಾವ ದಿನಾಂಕಂದು ಮೃತಪಟ್ಟಿರುತ್ತಾರೆಂದು

ಗೊತ್ತಿಲ್ಲ ಆದರೆ ಸುಮಾರು 25 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ನಾರಾಯಣಪ್ಪರವರು ಅಂಜಿನಪ್ಪರವರ ಮರಣಾ ನಂತರ ಮೃತಪಟ್ಟಿರುತ್ತಾರೆ.

ನಮ್ಮ ತಂದೆ ಸುಮಾರು 1963-64 ನೇ ಸಾಲಿನಲ್ಲಿ ಮೃತಪಟ್ಟಿರಬಹುದು, ನಿಖರವಾದ ದಿನಾಂಕ ಗೊತ್ತಿಲ್ಲ. ನಾರಾಯಣಪ್ಪರವರು ಸದರಿ ಮೀನುಗಾರಿಕೆ ಇಲಾಖೆಯಲ್ಲಿ ಕೆಲಸಕ್ಕೆ ಸೇರಿದ ನಂತರ ದೊಡ್ಡಬಳ್ಳಾಪುರಕ್ಕೆ ಬಂದು ನೆಲೆಸಿದ್ದರೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರು ಬಳ್ಳಾರಿ ಕ್ಯಾತಸಂದ್ರ, ದೊಡ್ಡಬಳ್ಳಾಪುರದಲ್ಲಿ ಕೆಲಸ ಮಾಡುತ್ತಿದ್ದರೆಂದು ನುಡಿಯುತ್ತಾರೆ. ಅಂಜಿನಪ್ಪರವರ ಮರಣಾ ನಂತರ ನಾರಾಯಣಪ್ಪರವರೇ ಮನೆ ವಿಚಾರಗಳನ್ನು ನೋಡಿಕೊಳ್ಳುತ್ತಿದ್ದರೆಂದರೆ ಸರಿ. ಸಾಕ್ಷಿ ಮುಂದುವರೆದು ನಾರಾಯಣಪ್ಪರವರ ಜವಾಬ್ದಾರಿಯಲ್ಲೇ ಅವರ ಮೂರು ಜನ ಅಣ್ಣ-ತಮ್ಮಂದಿರು ಇದ್ದರೆಂದು ನುಡಿಯುತ್ತಾರೆ. ಕುಟುಂಬದ ಸ್ವತ್ತುಗಳನ್ನು ಕೊಂಡುಕೊಳ್ಳಬೇಕಾದರೆ ಅಥವಾ ಮಾರಬೇಕಾದರೆ ಅವರೇ ನಿರ್ಣಯ ತೆಗೆದುಕೊಳ್ಳುತ್ತಿದ್ದರೆಂದರೆ ಸಾಕ್ಷಿ ನಾನು ಅ ಸಮಯದಲ್ಲಿ ಅಪ್ರಾಪ್ತ ವಯಸ್ಕಳಾದ್ದರಿಂದ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ದಾವೆಯನ್ನು ಯಾವ ಪರಿಹಾರ ಕೋರಿ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ನಮ್ಮ ಮದುವೆಗೆ ಇಟ್ಟಿದ್ದಂತಹ ಜಮೀನನ್ನು ನಾರಾಯಣಪ್ಪ, ರಾಮಯ್ಯ, ಕ್ಯಾತೇಗೌಡ ಮತ್ತು ದೊಡ್ಡೇಗೌಡರವರು ಮಾರಾಟ ಮಾಡಿ ನನ್ನ ಮದುವೆಯನ್ನೂ ಸಹ ಮಾಡದ ಕಾರಣ ದಾವೆ ಸಲ್ಲಿಸಿರುತ್ತೇನೆಂದು ನುಡಿಯುತ್ತಾರೆ. ಸದರಿ 4 ಜನ ಜಮೀನನ್ನು ಯಾರಿಗೆ ಮಾರಾಟ ಮಾಡಿರುತ್ತಾರೆಂಬುದು ಗೊತ್ತಿಲ್ಲ. ಸಾಕ್ಷಿ ಮುಂದುವರದು ಜಮೀನು ಮಾರಾಟ ಮಾಡಿದ ನಂತರ ನನ್ನನ್ನು ಮನೆಯಿಂದ ಹೊರ ಕಳುಹಿಸಿರುತ್ತಾರೆ. ಸದರಿ 4 ಜನರು ಜಮೀನನ್ನು ಮಾರಾಟ ಮಾಡಿ ಎಷ್ಟು ವರ್ಷಗಳಾಗಿರುತ್ತವೆಂಬುದು ಗೊತಿಲ್ಲ ಆದರೆ ಮಾರಾಟದ ಬಗ್ಗೆ ದಾಖಲಾತಿಯನ್ನು ಕೊಟ್ಟಿರುತ್ತೇನೆ.

ಸದರಿ 4 ಜನ ಜಮೀನನ್ನು ಮಾರಾಟ ಮಾಡಿದ ವಿಚಾರ ಯಾವಾಗ ಗೊತ್ತಾಗಿರುತ್ತದೆಂದರೆ ಸಾಕ್ಷಿ ಸದರಿ ವಿಚಾರ ನನಗೆ ಗೊತ್ತಾದ ನಂತರ ಅವರನ್ನು ಪ್ರಶ್ನಿಸಿದ್ದಕ್ಕೆ ಅವರು ನನ್ನನ್ನು ಮನೆಯಿಂದ ಹೊರ ಹಾಕಿರುತ್ತಾರೆ. ನಾನು ಮನೆಯಿಂದ ಹೊರ ಬಂದಾಗ ನನಗೆ ಸುಮಾರು 13-14 ವರ್ಷ ವಯಸ್ಸಾಗಿರಬಹುದು. ಅಗಿನಿಂದ ನಾನು ಬೇರೆಯವರ ಮನೆಯಲ್ಲಿ ಕೆಲಸ ಮಾಡುತ್ತಾ ಜೀವನ ಸಾಗಿಸುತ್ತಿದ್ದೇನೆ. ಪ್ರತಿವಾದಿಯರು ನನ್ನನ್ನು ಮನೆಯಿಂದ ಹೊರ ಹಾಕಿ ನನ್ನ ಭಾಗಕ್ಕೆ ಬರಬೇಕಾಗಿದ್ದ ಜಮೀನನ್ನು ಮಾರಾಟ ಮಾಡಿದ ಬಗ್ಗೆ ನ್ಯಾಯಾಲಯದಲ್ಲಿ ಪ್ರಶ್ನಿಸಿಲ್ಲ. ಸಾಕ್ಷಿ ನನಗೆ ಅಷ್ಟೊಂದು ತಿಳುವಳಿಕೆ ಇಲ್ಲ ಎಂದು ನುಡಿಯುತ್ತಾರೆ.

14ನೇ ಪ್ರತಿವಾದಿ ಪದ್ಮಾಮ್ಮರವರ ತವರು ಮನೆಯವರು ಅರ್ಥಿಕವಾಗಿ ಸಬಲರಾಗಿದ್ದಾರೆ. ಪದ್ಮಾಮ್ಮರವರ ತವರು ಮನೆಯವರು ಅರ್ಥಿಕವಾಗಿ ಸಬಲರಾಗಿದ್ದ ಕಾರಣ ಸರ್ವೆ ನಂ 14/4 ಬಿ

ಜಮೀನನ್ನು ಕ್ರಯಕ್ಕೆ ಪಡೆದಿರುತ್ತಾರೆಂದರೆ ಸರಿಯಲ್ಲ. ಸದರಿ ಸ್ವತ್ತುಗಳು ಪದ್ಮಮ್ಮ ಕ್ರಯಕ್ಕೆ ಪಡೆದುಕೊಂಡ ಕಾರಣ ಸದರಿ ಸ್ವತ್ತುಗಳು ಪದ್ಮಮ್ಮರವರ ಸ್ತ್ರೀಧನ ಸ್ವತ್ತುಗಳೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪದ್ಮಾಮ್ಮರವರ ತಾಯಿ ಮನೆಯವರ ಆರ್ಥಿಕ ಪರಿಸ್ಥಿತಿ ಚೆನ್ನಾಗಿರಲಿಲ್ಲ ಹಾಗೂ ಪದ್ಮಮ್ಮರವರಿಗೆ ಅವರ ತಾಯಿ ಮನೆಯವರು ಹತ್ತು ರೂ. ನಷ್ಟು ಸಹಾಯ ಮಾಡುವ ಆರ್ಥಿಕ ಸ್ಥಿತಿಯಲ್ಲಿರಲಿಲ್ಲ. ಪದ್ಮಾಮ್ಮರವರ ತಾಯಿ ಮನೆಯವರ ಅರ್ಥಿಕ ಪರಿಸ್ಥಿತಿ ಚೆನ್ನಾಗಿದ್ದರೂ ಸರಿ ಇಲ್ಲ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಈಗ ಪದ್ಮಮ್ಮರವರ ತವರು ಮನೆಯವರು ಈಗ ಸುಮಾರು 10-12 ವರ್ಷಗಳಿಂದ ಅರ್ಥಿಕ ಪರಿಸ್ಥಿತಿ ಚೆನ್ನಾಗಿದ್ದು ಅದರ ಪೂರ್ವದಲ್ಲಿ ಚೆನ್ನಾಗಿರಲಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ 66/4ಬಿ ಜಮೀನಿನಲ್ಲಿ ನನಗೆ ಯಾವುದೆ ಹಕ್ಕಿರದಿದ್ದರೂ ಸಹ ಉದ್ದೇಶಪೂರ್ವಕವಾಗಿ ಸದರಿ ಜಮೀನನ್ನು ದಾವೆಯಲ್ಲಿ ಸೇರಿಸಿರುತ್ತೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ
ದಂಡಾಧಿಕಾರಿಗಳು
ದೊಡ್ಡಬಳ್ಳಾಪುರ